## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

### ಸಿ.ಸಿ. ನಂ.31/2017

CW-1/PW-1

| | | |
|---|---|---|
| ಹೆಸರು | ಃ- | ಆಶಾ |
| ಗಂಡನ ಹೆಸರು | ಃ- | ನಟರಾಜು |
| ವಯಸ್ಸು | ಃ- | 40 ವರ್ಷ |
| ವೃತ್ತಿ | ಃ- | ಶಿಕ್ಷಕಿ |
| ವಾಸ ಸ್ಥಳ | ಃ- | ಬೇವೂರು, ಚನ್ನಪಟ್ಟಣ |
| ದಿನಾಂಕ | ಃ- | 14.09.2023 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಸಾಕ್ಷಿಯ ವಿಚಾರಣೆ ಃ-

ದಿನಾಂಕ 07.01.2017 ರಂದು ಸಂಜೆ 4.00 ಗಂಟೆ ಸಮಯದಲ್ಲಿ ನಾನು ಬಿಡದಿಯ ಲಕ್ಷ್ಮಿಸಾಗರ ಗೇಟ್ ಹತ್ತಿರವಿರುವ ಮಹರ್ಷಿ ಸೆಂಟರ್ ಫಾರ್ ಎಕ್ಸಲೆನ್ಸ್ ಶಾಲೆಗೆ ಶಿಕ್ಷಕಿ ಕೆಲಸಕ್ಕೆ ಅರ್ಜಿ ಸಲ್ಲಿಸಿ ನಮ್ಮ ಊರಿಗೆ ವಾಪಸ್ಸಾಗುತ್ತಿದ್ದಾಗ ಸದರಿ ಶಾಲೆಯ ಪಕ್ಕದ ರಸ್ತೆಯಲ್ಲಿ ನಾನು ನಡೆದುಕೊಂಡು ಬರುತ್ತಿದ್ದಾಗ ಅದೇ ಸಮಯಕ್ಕೆ ನನ್ನ ಹಿಂದಿನಿಂದ ನೀಲಿ ಬಣ್ಣದ ಪಲ್ಸರ್ ಗಾಡಿಯಲ್ಲಿ ಸುಮಾರು 30 ವರ್ಷ ವಯಸ್ಸಿನ ಇಬ್ಬರು ವ್ಯಕ್ತಿಗಳು ಬಂದು ಅವರ ಪೈಕಿ ಬೈಕಿನ ಹಿಂಬದಿಯಲ್ಲಿ ಕುಳಿತಿದ್ದ ವ್ಯಕ್ತಿ ನನ್ನ ಕತ್ತಿನಲ್ಲಿದ್ದ 70 ಗ್ರಾಂ ತೂಕದ ಚಿನ್ನದ ಮಾಂಗಲ್ಯದ ಸರವನ್ನು ಕಿತ್ತುಕೊಂಡು ಹೋಗಿದ್ದು, ಆ ಸಮಯದಲ್ಲಿ ನಾನು ಕೆಳಗೆ ಬಿದ್ದೆನು. ನಾನು ಕೆಳಗೆ ಬಿದ್ದು ಗಾಬರಿಗೊಂಡಿದ್ದ ಕಾರಣದಿಂದ ಗಾಡಿಯ ನೋಂದಣಿ ಸಂಖ್ಯೆ ನೋಡಲು ಸಾಧ್ಯವಾಗಿರುವುದಿಲ್ಲ. ನಾನು ಬೈಕಿನ ಹಿಂಬದಿಯಲ್ಲಿದ್ದ ವ್ಯಕ್ತಿಯನ್ನು ನೋಡಿದ್ದು, ಬೈಕಿನ ಚಾಲಕ ಹೆಲ್ಮೆಟ್

ಧರಿಸಿದ್ದ ಕಾರಣ ಆತನ ಮುಖ ಕಾಣಲಿಲ್ಲ. ನನ್ನ ಚಿನ್ನದ ಮಾಂಗಲ್ಯದ ಸರದ ಅಂದಿನ ಅಂದಾಜು ಬೆಲೆ 1,40,000/- ರೂಗಳು ಆಗಿತ್ತು.

2. ನಾನು ಘಟನೆಯ ಬಗ್ಗೆ ಅದೇ ದಿನ ಸಂಜೆ 6.00 ಗಂಟೆ ಸುಮಾರಿಗೆ ದೂರನ್ನು ಕೊಟ್ಟಿರುತ್ತೇನೆ. ದೂರನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ದೂರನ್ನು ನಿಪಿ-1 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ನಾನು ದೂರನ್ನು ಕೊಟ್ಟ ಅದೇ ದಿನ ಸಂಜೆ 6.00 ರಿಂದ 6.30 ರ ನಡುವೆ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು ನನ್ನ, ಸ್ಥಳೀಯರ ಹಾಗೂ ಚಾಸಾ-6 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದರು. ಸದರಿ ಮಹಜರನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಮಹಜರನ್ನು ನಿಪಿ-2 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

4. ದಿನಾಂಕ 03.02.2017 ರಂದು ನನ್ನ ಸರವನ್ನು ಸುಲಿಗೆ ಮಾಡಿದ ಆರೋಪಿಗಳು ಸಿಕ್ಕಿರುತ್ತಾರೆಂದು ಪೊಲೀಸರು ತಿಳಿಸಿದ್ದು, ನನ್ನನ್ನು ಕಗ್ಗಲೀಪುರ ಪೊಲೀಸ್ ಠಾಣೆಗೆ ಕರೆಯಿಸಿ ಅಲ್ಲಿ ಅಹಮದ್ ಹಾಗೂ ಫಿರೋಜ್ ಪಾಷಾ ಎಂಬ ಇಬ್ಬರು ಆರೋಪಿಗಳನ್ನು, ಪಲ್ಸರ್ ಬೈಕನ್ನು ಹಾಗೂ ನನ್ನ ಮಾಂಗಲ್ಯದ ಸರವನ್ನು ತೋರಿಸಿದರು. ಸದರಿ ಮಾಂಗಲ್ಯದ ಸರವನ್ನು ನಾನು ನ್ಯಾಯಾಲಯದ ಆದೇಶದಂತೆ ನನ್ನ ವಶಕ್ಕೆ

ಪಡೆದುಕೊಂಡಿದ್ದು, ಸದರಿ ಮಾಂಗಲ್ಯದ ಸರವನ್ನು ಈಗ ಭಾವಚಿತ್ರಗಳಲ್ಲಿ ನೋಡುತ್ತಿದ್ದು ಗುರುತಿಸುತ್ತೇನೆ. 2 ಭಾವಚಿತ್ರಗಳನ್ನು ಒಟ್ಟಾಗಿ **ನಿಪಿ-**3 ಎಂದು ಗುರುತಿಸಲಾಯಿತು. ಘಟನೆಯ ದಿನ ನನ್ನ ಕುತ್ತಿಗೆಯಲ್ಲಿದ್ದ ಸರವನ್ನು ಕಿತ್ತುಕೊಂಡ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಹಾಗೂ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ನನಗೆ ತೋರಿಸಲಾದ ಇಬ್ಬರು ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.